# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **524** |
| **ಸದಸ್ಯರ ಹೆಸರು** | : | **ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | : | **12.12.2024** |
| **ಉತ್ತರಿಸಬೇಕಾದ ಸಚಿವರು** | : | **ಉಪ ಮುಖ್ಯಮಂತ್ರಿ** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2024ರ ಅಕ್ಟೋಬರ್‌ನಲ್ಲಿ ಸುರಿದ ಮಳೆಗೆ ಬೆಂಗಳೂರಿನ ಹಲವು ಪ್ರದೇಶಗಳು ಜಲಾವೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅತಿ ಹೆಚ್ಚು ಜಲಾವೃತವಾದ ಪ್ರದೇಶಗಳು ಯಾವುವು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಜಲಾವೃತವಾದ ಪ್ರದೇಶಗಳ ವಿವರವನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| (ಆ) | ಬಿಡಿಎ ವತಿಯಿಂದ ನಿರ್ಮಾಣವಾದ ಬಡಾವಣೆಗಳು ಸಹ ಜಲಾವೃತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಬಿಡಿಎ ವತಿಯಿಂದ ನಿರ್ಮಾಣವಾದ ಯಾವ ಬಡಾವಣೆಗಳು ಜಲಾವೃತವಾಗಿದ್ದವು; ಜಲಾವೃತವಾಗಲು ಪ್ರಮುಖ ಕಾರಣಗಳು ಏನು; | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಾಣವಾದ ಬಡಾವಣೆಗಳು ಮಳೆಯಿಂದಾಗಿ ಜಲಾವೃತವಾಗಿರುವುದಿಲ್ಲ. |
| (ಇ) | ಬಿಡಿಎ ವತಿಯಿಂದ ಬಡಾವಣೆಗಳು ನಿರ್ಮಾಣವಾಗುವಾಗ ನೀರಿನ ನೈಸರ್ಗಿಕ ಹರಿವನ್ನು ನೋಡದೆ/ತಿಳಿಯದೆ ಬಡಾವಣೆ ನಕ್ಷೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸದಾಗಿ ನಿರ್ಮಾಣವಾಗುತ್ತಿರುವ ಬಡಾವಣೆಗಳಲ್ಲಿ ಈ ರೀತಿ ಮಾಡಿದ ನಕ್ಷೆ/ಯೋಜನೆ ಬದಲಾವಣೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು; | • ಬಿಡಿಎ ವತಿಯಿಂದ ಹೊಸದಾಗಿ ನಿರ್ಮಾಣವಾಗುತ್ತಿರುವ ಬಡಾವಣೆಗಳಲ್ಲಿ ನೀರಿನ ನೈಸರ್ಗಿಕ ಹರಿವನ್ನು ಪರಿಗಣಿಸಿ ಹಾಗೂ ಅತಿ ಹೆಚ್ಚು ಬೀಳಬಹುದಾದ ಮಳೆಯ ಪ್ರಮಾಣವನ್ನು ಅಂಕಿ ಅಂಶಗಳಿಂದ ಪರಿಶೀಲಿಸಿ, ನೀರಿನ ಹರಿವಿನ ಲೆಕ್ಕಾಚಾರ ಮಾಡಿ ಅದರಂತೆ ನಾಲೆಗಳ ಸಾಮರ್ಥ್ಯ ನಿರ್ಧರಿಸಿ ಅದರಂತೆ ಚರಂಡಿಗಳು ಹಾಗೂ ನಾಲೆಗಳನ್ನು ನಿರ್ಮಿಸಿ ಬಡಾವಣೆಗಳನ್ನು ರಚಿಸಲಾಗುತ್ತಿದೆ.<br>• ಹೊಸ ಬಡಾವಣೆ ಅನುಮೋದನೆ ಸಂದರ್ಭದಲ್ಲಿ ಕಂದಾಯ ದಾಖಲೆಯಂತೆ ಇರುವ ನಾಲಾಗಳಿಗೆ ಸೂಕ್ತ ಬಫರ್ ಅಳವಡಿಸಿ, ಅದನ್ನು ಸಂರಕ್ಷಿಸಲು ಕ್ರಮ ಜರುಗಿಸಲಾಗಿರುತ್ತದೆ. |
| (ಈ) | ಶಿವರಾಮ ಕಾರಂತ ಬಡಾವಣೆ, ಸೋಮನಶೆಟ್ಟಿಹಳ್ಳಿ ಸೆಕ್ಟರ್-7 ರಲ್ಲಿ ಎತ್ತರ ಪ್ರದೇಶವಾದ ಸರ್ವೆ ನಂ.1/7 ರಿಂದ 1/5ರ ಮೂಲಕ ರಸ್ತೆ ಮತ್ತು ಚರಂಡಿಯನ್ನು ಮಾಡಿ ಗ್ರಾಮಠಾಣಾ ಪ್ರದೇಶದ ಸಮೀಪ ತಗ್ಗು ಪ್ರದೇಶದ ಸಮೀಪ ಅಂತ್ಯಗೊಳಿಸಿ, ಗ್ರಾಮಠಾಣಾ ಪ್ರದೇಶಕ್ಕೆ ನೀರು ನುಗ್ಗುವಂತೆ ನಕ್ಷೆ | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

| | | |
|---|---|---|
| | ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ರಸ್ತೆಯನ್ನು 1/5 ಮೂಲಕ ಮುಂದುವರೆಸಲು ಸರ್ಕಾರ ಕೈಗೊಳ್ಳುವ ಕ್ರಮವೇನು; | |
| (ಉ) | ಗ್ರಾಮಠಾಣಾ ಪಕ್ಕದಲ್ಲಿ ಸರ್ವೆ ನಂ 1/5ರ ಮೂಲಕ ರಸ್ತೆ ಮತ್ತು ಚರಂಡಿಯನ್ನು ಮುಂದುವರಿಸುವಂತೆ ಬಿ.ಡಿ.ಎಗೆ ಸಾರ್ವಜನಿಕರು ಮನವಿಯನ್ನು ನೀಡಿರುವರೇ; ನೀಡಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು; | ಈ ಕುರಿತು ಸಾರ್ವಜನಿಕರಿಂದ ಯಾವುದೇ ಮನವಿಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುವುದಿಲ್ಲ. |
| (ಊ) | ಶಿವರಾಮ ಕಾರಂತ ಬಡಾವಣೆಯಲ್ಲಿ ಕೆಲವು ದಲ್ಲಾಳಿಗಳು ರಸ್ತೆ ಮತ್ತು ಚರಂಡಿಯನ್ನು ಅಧಿಕಾರಿಗಳೊಂದಿಗೆ ಸೇರಿ ಬದಲಾವಣೆ ಮಾಡಿಕೊಡುವುದಾಗಿ ಭರವಸೆ ನೀಡಿ ಸಾರ್ವಜನಿಕರಿಂದ ಹಣ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ದಲ್ಲಾಳಿಗಳಿಗೆ ಅಧಿಕಾರಿಗಳೊಂದಿಗೆ ಇರುವ ಸಂಪರ್ಕದ ಬಗ್ಗೆ ತನಿಖೆ ನಡೆಸಿ, ಸರ್ಕಾರ ಕೈಗೊಂಡ ಕ್ರಮವೇನು? | ಯಾವುದೇ ರೀತಿಯ ಅಧಿಕಾರಿಗಳು ದಲ್ಲಾಳಿಗಳೊಂದಿಗೆ ಸಂಪರ್ಕದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |

**ಸಂಖ್ಯೆ: ನಅಇ 439 ಬೆಂಅಸೇ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

# ಅನುಬಂಧ-1

| ಯಲಹಂಕ ವಲಯ | ಮಹದೇವಪುರ ವಲಯ |
|---|---|
| 1. ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ಗಳು.<br>2. ಕುರ್ಲಪ್ಪ ಲೇಔಟ್.<br>3. ಸುರಭಿ ಲೇಔಟ್.<br>4. ರಮಣಶ್ರೀ ಕ್ಯಾಲಿಫೋರ್ನಿಯಾ ಗಾರ್ಡನ್ಸ್.<br>5. ಸೋಮೇಶ್ವರ ನಗರ ಮತ್ತು ಕನಕ ನಗರ.<br>6. ಅಂಬೇಡ್ಕರ್ ನಗರ.<br>7. ಅಲ್ಲಾಳಸಂದ್ರ.<br>8. ಬಸವ ಸಮಿತಿ.<br>9. ಎಲ್.ಜಿ ಎನ್‌ಕ್ಲೇವ್<br>10. ವೆಂಕಟಸ್ವಾಮಪ್ಪ ಲೇಔಟ್.<br>11. ಎಂ.ಎಸ್ ಪಾಳ್ಯ<br>12. ಯರಪ್ಪ ಗಾರ್ಡನ್.<br>13. ಟಾಟಾ ನಗರ.<br>14. ಬಾಲಾಜಿ ಲೇಔಟ್ ಮತ್ತು ಭದ್ರಪ್ಪ ಲೇಔಟ್.<br>15. ಡೈನ್ಯಾಸ್ಟಿ ಲೇಔಟ್.<br>16. ಎಂಸಿಇಸಿಹೆಚ್‌ಎಸ್ ಲೇಔಟ್.<br>17. "ಜಿ" ಬ್ಲಾಕ್ ಸಹಕಾರನಗರ.<br>**18.** ಫಾತಿಮಾ ಮತ್ತು ತುಬಾ ಲೇಔಟ್. | 1. ಸಾಯಿ ಬಡಾವಣೆ, ಗೆದ್ದಲಹಳ್ಳಿ<br>2. ಕೊತ್ತೂರು ಪೋಲಿಸ್ ಠಾಣೆ<br>3. ರಾಮಮೂರ್ತಿನಗರ<br>4. ಗಾಯಿತ್ರಿ ಬಡಾವಣೆ<br>5. ಬಿಳಿಶಿವಾಲೆ, ರಾಮಪುರ ಕೆರೆ<br>6. ಸಕ್ರ ಆಸ್ಪತ್ರೆ |
| **ದಾಸರಹಳ್ಳಿ ವಲಯ** | **ಪೂರ್ವ ವಲಯ** |
| 1. ನಿಸರ್ಗ ಬಡಾವಣೆ<br>2. ಕಾವೇರಿ ಬಡಾವಣೆ<br>3. ಅಬ್ಬಿಗೆರೆ ಕೆರೆ<br>4. ಲಕ್ಷ್ಮೀಪುರ | 1. ನಂದ ಗೋಕುಲಾ ಬಡಾವಣೆ<br>2. ಹೆಚ್.ಬಿ.ಆರ್ 5ನೇ ಬ್ಲಾಕ್<br>3. ವಿಜಯಬ್ಯಾಂಕ್ ಕಾಲೋನಿ<br>4. ಹೆಬ್ಬಾಳ ರೈಲ್ವೆ ಕೆಳ ಸೇತುವೆ ವಿಸ್ಪರಿಂಗ್ ಅಪಾರ್ಟ್‌ಮೆಂಟ್ಸ್<br>5. ಇಂದಿರಾನಗರ 17ನೇ ಈ ಮತ್ತು 17ನೇ ಡಿ ಅಡ್ಡ ರಸ್ತೆ<br>6. ಸತ್ಯನಾರಾಯಣ ದೇವಸ್ಥಾನ ಬೀದಿ |